## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಶ್ರೀ ಗದಿಗೆಪ್ಪ ಕುರಕೋಟೆ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್, ಬೀದರ್ ಜಿಲ್ಲೆ, ಇವರ ಅಮಾನತ್ತು ಅವಧಿಯನ್ನು ಸಕ್ರಮಗೊಳಿಸುವ ಬಗ್ಗೆ.

ಓದಲಾಗಿದೆ: 1. .ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ವಿಸೇಬಿ 2013, ದಿನಾಂಕ: 09.10.2013.

2. .ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ವಿಸೇಬಿ 2013, ದಿನಾಂಕ: 24.01.2014.

3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ವಿಸೇಬಿ 2013, ದಿನಾಂಕ: 26.06.2015.

4. ಶ್ರೀ ಗದಿಗೆಪ್ಪ ಕುರಕೋಟೆ , ಇವರ ಮನವಿ ದಿ: 09.10.2015.

ಪ್ರಸ್ತಾವನೆ:-

ಶ್ರೀ ಗದಗೆಪ್ಪ ಕುರಕೋಟೆ, ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್(ಬಿ), ಬೀದರ್ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ್ದಾರೆನ್ನಲಾದ ಕರ್ತವ್ಯಲೋಪ/ದುರ್ನಡತೆ ಆರೋಪಗಳಿಗೆ ಸಂಬಂಧಿಸಿದಂತೆ, ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ12(1)(ಎ)ರ ಅಡಿಯಲ್ಲಿ ಕೈಗೊಳ್ಳಲಾಗಿದ್ದು, ಆಪಾದಿತ ಅಧಿಕಾರಿಯ ಕರ್ತವ್ಯಲೋಪದ ಗಂಭೀರತೆಯನ್ನು ಪರಿಗಣಿಸಿ, ಸದರಿಯವರಿಗೆ ಸದರಿ ನಿಯಮಗಳ ನಿಯಮ 8(ii)ರಡಿ "ವಾಗ್ದಂಡನೆ" ವಿಧಿಸಿ, ಆದೇಶಿಸಲಾಗಿತ್ತು.

ಮೇಲಿನ ಕ್ರಮಸಂಖ್ಯೆ-(2)ರಲ್ಲಿ ಓದಲಾದ ದಿನಾಂಕ: 09.10.2015ರ ಪತ್ರದಲ್ಲಿ ಶ್ರೀ ಗದಗೆಪ್ಪ ಕುರಕೋಟೆ, ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮಾನತ್ತಿನಲ್ಲಿ ಕಳೆದ ದಿನಾಂಕ: 09.10.2013 ರಿಂದ 24.01.2014ರ ಅವಧಿಯನ್ನು ತಮ್ಮ ಹಕ್ಕಿನಲ್ಲಿರುವ ರಜೆಯೆಂದು ಪರಿಗಣಿಸಿ, ಉಳಿದ ಶೇಕಡ 50ರಷ್ಟು ವೇತನವನ್ನು ಬಿಡುಗಡಗೊಳಿಸಬೇಕೆಂದು ಕೋರಿರುತ್ತಾರೆ. ಶ್ರೀ ಗದಿಗೆಪ್ಪ ರವರ ಕೋರಿಕೆ ಬಗ್ಗೆ ಪರಿಶೀಲಿಸಿದೆ.

ಶ್ರೀ ಗದಗೆಪ್ಪ ಕುರಕೋಟೆ, ಇವರ ದಿನಾಂಕ: 09.10.2013ರಿಂದ 24.01.2014ರ ವರೆಗಿನ 105ದಿನಗಳ ಅಮಾನತ್ತು ಅವಧಿಯನ್ನು ಅವರ ಹಕ್ಕಿನಲ್ಲಿರುವ 188 ಪರಿವರ್ತಿತ ರಜೆಗಳಲ್ಲಿ 105 ಪರಿವರ್ತಿತ ರಜೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 100(7) ರನ್ವಯ ಮಂಜೂರು ಮಾಡಿ, ದಿನಾಂಕ: 09.10.2013 ರಿಂದ 24.01.2014ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 100ರಡಿಯಲ್ಲಿ ಅಮಾನತ್ತಿನ ಅವಧಿಯನ್ನು ಸಕ್ರಮಗೊಳಿಸಿ ಅವರ ಹಕ್ಕಿನಲ್ಲಿರುವ ರಜೆ/ಅಸಾಧಾರಣ ರಜೆಯೆಂದು ಪರಿಗಣಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 250 ವಿಸೇಬಿ 2013, ಬೆಂಗಳೂರು ದಿನಾಂಕ: 23.02.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಶ್ರೀ ಗದಿಗೆಪ್ಪ ಕುರಕೋಟೆ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್(ಬಿ) ಬೀದರ್ ಜಿಲ್ಲೆ ಪ್ರಸ್ತುತ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರ ದಿನಾಂಕ :09.10.2013ರಿಂದ 24.01.2014ರ ವರೆಗಿನ

-2

ಅಮಾನತ್ತಿನ ಅವಧಿಯನ್ನು ಅವರ ಹಕ್ಕಿನಲ್ಲಿರುವ 105 ಪರಿವರ್ತಿತ ರಜೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 100(7)ರ ಪ್ರಕಾರ ಅವರ ಹಕ್ಕಿನಲ್ಲಿರುವ ರಜೆ/ ಅಸಾಧಾರಣ ರಜೆಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/2/16
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು,(ಎ&ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್/ಬಳ್ಳಾರಿ.
3. ಶ್ರೀ ಗದಗೆಪ್ಪ ಕುರಕೋಟಿ, ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬಳ್ಳಾರಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.